ಗೌರ್ನಮೆಂಟಿನವರು ತಮ್ಮ 10—12—07ನೆ ನಮ್ಬರ್ 5430-70—Ml. 413-06-4ನೆ ನಂಬರ್ ಪ್ರೊಸೀಡಿಂಗ್ಸಿನ 2 ಮತ್ತು 3ನೆ ಪ್ಯಾರಾಗಳಲ್ಲಿ ಚನ್ನಾಗಿ ವಿಶದಪಡಿಸಿರುವಂತೆ ಇರೇಬಿನಲ್ಲಿ ನಮೂದಿಸಿರುವ ಕಟ್ಟಡಗಳು ಮ್ಯುನಿಸಿಪಲ್ ರೆಗ್ಯುಲೇಷನ್ 59 (a)ನ ಸೆಕ್ಷನ್‌ಗೆ ಲಗಾವಾಗುವದಿಲ್ಲವಾದ್ದರಿಂದ ಕೌನ್ಸಿಲ್ಲನವರು ಪುನರಾಲೋಚನೆ ಮಾಡಿದ್ದರಲ್ಲಿ ಸದರೀ ಕಟ್ಟಡಗಳಿಗೆ ಕಂದಾಯ ದಾಖಲಾಗಬೇಕೆಂದು ಅಭಿಪ್ರಾಯಪಡುತ್ತಾರೆ.

1. ನೇಟಿವ್ ನರ್ಸಸ್ ಕ್ವಾರ್ಟರ್ಸ್.
2. ಜೈಲರ್ಸ್ ಕ್ವಾರ್ಟರ್ಸ್.
3. ಮೈಟ್ರ್ಯಸ್ ಕ್ವಾರ್ಟರ್ಸ್.
4. ಡಿಪ್ಯೂಟಿ ಜೈಲರ್ಸ್ ಕ್ವಾರ್ಟರ್ಸ್‌ವಗೈರೆ.

VII. ಮೈಸೂರು ಲಕ್ಷ್ಮೀಪುರ ಬಡಾವಣೆ ಡ್ರೈನೇಜು ಮತ್ತು ಇತರ ಕೆಲವು ಕೆಲಸಗಳಿಗೋಸ್ಕರ 17,135 ರೂಪಾಯಿಗಳ ಅಂದಾಜವನ್ನು ಕೆಲವು ರಿಮಾರ್ಕ್ಸ್‌ಸೊಡನೆ ಮಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 12-2-09ನೆ ನಮ್ಬರ್ 7807-11—Ml. 159-08ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

VIII. ಸ್ವಂತ ಉಪಯೋಗಕ್ಕೋಸ್ಕರ ಮ್ಯುನಿಸಿಪಲ್ ಸರಹದ್ದಿನೊಳಕ್ಕೆ ತರತಕ್ಕ ಹಾಸಲಿಗೆ ಸಂಬಂಧಪಟ್ಟ ಸ್ವಲ್ಪ ಸಾಮಾನುಗಳಿಗೆ ಹಾಸಲು ವಜಾ ಮಾಡತಕ್ಕ ವಿಷಯದಲ್ಲಿ 1908ನೆ ಇಸವಿ ದಸರಾ ಅಸ್ಸೆಂಬ್ಲಿ 161ನೆ ನಂಬರ್ ಸಬ್ಜೆಕ್ಟಿಗೆ ಗಮನಕೊಟ್ಟು ಕೌನ್ಸಿಲ್ಲನವರ ಅಭಿಪ್ರಾಯ ತಿಳಿಸಬೇಕೆಂದು ಗೌರ್ನಮೆಂಟು ಸೆಕ್ರಿಟರಿಯವರಿಂದ ತಲಪಿರುವ 2—3—09ನೆ ನಮ್ಬರ್ 8510-9—Ml. 281—08—2ನೆ ನಂಬರ್ ಡಾಕೆಟ್.

ಈ ಕೆಳಗೆ ನಮೂದು ಮಾಡಿರುವ ಸಾಯರು ಹಾಸಲಿಗೆ ಸಂಬಂಧಪಟ್ಟ ಜಿನಸಿಗಳನ್ನು ಅದರ ಪಕ್ಕದಲ್ಲಿ ನಮೂದಿಸಿರುವ ಪ್ರಮಾಣ ವ ಸಂಖ್ಯೆವರಿಗೆ ವ್ಯಾಪಾರಸ್ಥರಲ್ಲದ ಇತರರು ತಮ್ಮ ಸ್ವಂತ ಉಪಯೋಗಕ್ಕೆ ಚಿಲ್ಲರೆಯಾಗಿ ಮ್ಯುನಿಸಿಪಲ್ ಸರಹದ್ದಿನೊಳಕ್ಕೆ ತಂದರೆ ಸಾಯರು ಹಾಸಲನ್ನು ವಿನಾಯಿತಿ ಮಾಡುತ್ತಾ ಇದೆ.

ಬೆಲ್ಲಾ	...	...	...	5 ಸೇರು
ಸಕ್ಕರೆ	...	...	...	5 ಸೇರು
ತುಪ್ಪ ಮತ್ತು ಬೆಣ್ಣೆ	...	...	...	5 ಸೇರು
ಹೊಗೋಸೊಪ್ಪು	...	...	...	$\frac{1}{4}$ ಸೇರು
ವೀಳ್ಯದೆಲೆ	...	...	...	100 ಎಲೆಗಳು
ತೆಂಗಿನಕಾಯಿ	...	...	...	5

IX. 1909-10ನೆ ಸಾಲಿನ ಡ್ರಾಫ್ಟ್ ಬಡ್ಜೆಟ್ ಅಂದಾಜು ಏಪ್ರಿಲ್ ತಿಂಗಳಲ್ಲಿ ಸ್ಪೆಷಲ್ ವಿಾಟಿಂಗಿನಲ್ಲಿ ಚರ್ಚಿಸತಕ್ಕದ್ದಾಗಿ ಆರ್ಡರ್ ಮಾಡಿದೆ.

ಎಂ. ಜೆ. ಕೃಷ್ಣಸ್ವಾಮಿರಾವ್,
ವೈಸ್ ಪ್ರೆಸಿಡೆಂಟ್.

ಹಾಸನ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 19ನೆ ಏಪ್ರಿಲ್ 1909.

1. ಸ್ ಸ 1908ನೆ ಜನವರಿ 16ನೆ ನಮ್ಬರ್ ಗವರ್ನಮೆಂಟು ಪ್ರೊಸೀಡಿಂಗ್ಸು ನಂ. F. L. 3529-33—B. 3-07-17 ಅನುಸರಿಸಿ ಸಕಲೇಶಪುರದ ಲೇಟ್ ಅಗ್ರಿಕಲ್ಚರಲ್ ಬ್ಯಾಂಕಿನ ಮೆಂಬರಾದ ಲೇಟ್ ಮಿ|| ಸುಂಡೆಕೆರೆ ಶ್ರೀಕಂಠಯ್ಯನವರ್ಕ ಕುಟುಂಬ ಲಕ್ಷ್ಮೀದೇವಮ್ಮನವರು ಮತ್ತು ಮಗ ಗುಂಡಪ್ಪನವರು ಇವರುಗಳಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಮತ್ತು ಸಾಲದ ಹಣದ ಬಾಕೀಗಾಗಿ ಇದರಡಿ ನಮೂದಾಗುವ ಕಾಫಿ ತೋಟಗಳಲ್ಲಿ ಸದರಿಯವರಿಗೆ ಇರತಕ್ಕ ಹಕ್ಕು ಬಾಧ್ಯತೆಯು ಹಾಸನದ ಡಿಸ್ಟ್ರಿಕ್ಟು ಮಂಜರಾಬಾದು ತಾಲ್ಲೂಕು ಸಕಲೇಶಪುರದ ತಾಲ್ಲೂಕು ಕಚೇರಿ ಬಳಿ ಬರುವ 1909ನೆ ಮೇ ಮಾಹೆ 28ನೆ ತಾರೀಖು ಶುಕ್ರವಾರ ದಿವಿ 11 ಘಂಟೆಗೆ ಡೆಪ್ಯೂಟಿ ಕಮಿಷನರ್ ಸಾಹೇಬರವರಿಂದ ಯಾ ಅವರಿಂದ ನೇಮಿಸಲ್ಪಡುವ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರಿಂದ ಬಹಿರಂಗವಾದ ಹರಾಜು ಮಾಡಿಸಲ್ಪಡುತ್ತೆ.

2. ಹರಾಜು ನಿಬಂಧನೆಗಳು ಈ ಕೆಳಗೆ ನಮೂದಿಸಲ್ಪಟ್ಟಿವೆ.

(1) ಹರಾಜು ಗೌರ್ನಮೆಂಟಿನವರ ಮಂಜೂರಾತಿಗೆ ವಳಪಟ್ಟಿರುತ್ತೆ.

(2) ಆಖೈರು ಸವಾಲನ್ನು ಅಂಗೀಕರಿಸುವದು ಯಾ ತಿರಸ್ಕರಿಸುವದು ಗವರ್ನಮೆಂಟಿನವರ ತೀರ್ಮಾನಕ್ಕೆ ಬಳಪಟ್ಟಿರುತ್ತೆ.

(3) ಹರಾಜು ಮಂಜೂರಾಗದೇಲೂ ಯಾ ಮಂಜೂರಾಗುವದಕ್ಕೆ ಸಾವಕಾಶವಾದರೂ ಛಡ ಸವಾಲ್‌ದಾರನಿಗೆ ಯಾವವಿಧವಾದ ತಕರಾರುಮಾಡಲೂ ರಹ ಇರುವದಿಲ್ಲ.

(4) ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡ ಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

(5) ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

(6) ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನ ವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

(7) ಹರಾಜು ಗವರ್ನ್‌ಮೆಂಟನವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

(8) ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಗವರ್ನ್‌ಮೆಂಟನವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡಿಪ್ಯುಟಿ ಕಮಿಷನರವರಿಂದ ಸೈ॥ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲಿ ಯಾ ವಿಸ್ತೀರ್ಣದಲ್ಲಿಯೂ ಇರುವ ಸಂಭವನೀಯತೆಗಳಿಗೆ ಗವರ್ನ್‌ಮೆಂಟನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

ಬಾಕೀದಾರರಿಂದ ಬರಬೇಕಾದ ಮೊಬಲಗು ಮತ್ತು ಹರಾಜುದಾರನು ಚಾಲ್ತಿ ಸಾಲಿನಲ್ಲಿ ಸರ್ಕಾರಕ್ಕೆ ಕೊಡಬೇಕಾದ ಕಂದಾಯದ ಮೊಬಲಗು ಈ ಕೆಳಿಗೆ ಷೆಡ್ಯೂಲಿನಲ್ಲಿ ವಿವರಿಸಿರುತ್ತೆ.

ಷೆಡ್ಯೂಲ್.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡಗಳ ಸ್ವಭಾವ.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ತರಹ.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಅ.	ಅಂದಾಜು ಕಿಮ್ಮತ್ತು ಸನ್ 1904ರಲ್ಲಿ.	ಸರ್ಕಾರಕ್ಕೆ ಸಾಲೀಯಾನಾ ಕೊಡಬೇಕಾದ ಜೋಡಿ ಯಾ ಕಾಯಂ ಗುತ್ತಾ ಮೊಬಲಗು.	ಸರ್ಕಾರಕ್ಕೆ ಬರಬೇಕಾದ ಬಾಕಿ.		
														ರೂ.	ಅ.	ಪೈ.
ನಂಜರಾಜಪಟ್ಟಣ	ಸಕಲೇಶಪುರ															
		ಕೆಲಗಳಲಿ				159	ಕಾಫಿ	17	2	26	0					
						160	ಡಿಟೋ	19	28	30	0					
						166	ಡಿಟೋ	28	4	41	8					
						172	ಡಿಟೋ	12	3	18	0					
						173	ಡಿಟೋ	14	20	22	0					
						181	ಡಿಟೋ	14	31	14	8					
						182	ಡಿಟೋ	24	1	36	0					
						205	ಡಿಟೋ	10	22	16	0					
						206	ಡಿಟೋ	2	19	3	12					
						198	ಡಿಟೋ	2	5	2	0					
						*175	ಡಿಟೋ	12	29	3	4					
						170	ಡಿಟೋ	18	0	27	0					
						207	ಡಿಟೋ	6	0	6	0					
							ಜುಮ್ಲಾ	182	4	246	0	ರೂ. 31,096	...			
		ಕಿರಹಳ್ಳಿ				179	ಕಾಫಿ	18	10	27	0					
						196	ಡಿಟೋ	7	28	7	12					
							ಜುಮ್ಲಾ	25	38	34	12					
		ಲೇಫ್ ವಿ॥ ಸುಂಡಿಕೆರೆ ಶ್ರೀಕಂಠಯ್ಯನವರ ಕಟ್ಟುಮಂಜಿ ಲಕ್ಷ್ಮಿದೇವಮ್ಮನವರು ನಂಗ ಗುಂಡಪ್ಪನವರು			* ಬಿಂಗ್ಲೆ ಮತ್ತು ಇದಕ್ಕೆ ಸೇರಿದ ಕಟ್ಟಡಗಳು.	5,812—8—0		ಒಟ್ಟು ಜುಮ್ಲಾ	208	2	280	12					

1907—08ನೆ ಸಾಲ್ ಆಪ್ಶೆರಿಗೆ ಬರಬೇಕಾದ ಟೋಕ್ ... ರೂ. 67,440 0 0
ಡಿಟೋ ವರಿಗೆ ಬರಬೇಕಾದ ಬಡ್ಡಿ ... 27,845 4 10
ಜುಮ್ಲಾ ... 95,285 4 10

ಬಿ. ಆರ್. ಡಬ್ಲ್ಯೂ. ವೆದರಾಲ್,
ಡಿಪ್ಯುಟಿ ಕಮಿಷನರ್.